ಬೀದರ ವಿಶ್ವವಿದ್ಯಾಲಯ BIDAR UNIVERSITY

ಜ್ಞಾನ ಕಾರಂಜ ಹಾಲಹಳ್ಳಿ (ಕೆ), ಬೀದರ 585 414 ಕರ್ನಾಟಕ ಭಾರತ

ಶೈಕ್ಷಣಿಕ ವಿಭಾಗ/Academic Section E-Mail: registrarbidar@gmail.com

ಸಂಖ್ಯೆ.ಬೀ.ವಿ.ಬೀದರ/ಆಡಳಿತ/ಅ.ಉ-17/2026-27/476 ದಿನಾಂಕ:09.10.2025

# ಅಧಿಸೂಚನೆ

## ಬೀದರ ವಿಶ್ವವಿದ್ಯಾಲಯದ 2026-27ನೇ ಶೈಕ್ಷಣಿಕ ಸಾಲಿಗೆ ಅತಿಥಿ ಉಪನ್ಯಾಸಕರ ಹುದ್ದೆಗಳಿಗೆ ಅರ್ಜಿ ಆಹ್ವಾನ

ಬೀದರ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ಕನ್ನಡ, ಇಂಗ್ಲೀಷ, ಉರ್ದು, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಸಮಾಜಕಾರ್ಯ, ಮಹಿಳಾ ಅಧ್ಯಯನ, ವಾಣಿಜ್ಯಶಾಸ್ತ್ರ, ಗಣಕ ವಿಜ್ಞಾನ, ಗಣಿತಶಾಸ್ತ್ರ, ರಸಾಯನಶಾಸ್ತ್ರ, ಪ್ರಾಣಿಶಾಸ್ತ್ರ, ಭೌತಶಾಸ್ತ್ರ ಸ್ನಾತಕೋತ್ತರ ಪದವಿ ವಿಭಾಗಗಳಲ್ಲಿ ಹಾಗೂ ಇತಿಹಾಸ ಸ್ನಾತಕೋತ್ತರ ಪದವಿ ವಿಭಾಗ(ಸ್ನಾತಕೋತ್ತರ ಕೇಂದ್ರ ಬಸವಕಲ್ಯಾಣ)ದಲ್ಲಿ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸಲು ಅರ್ಹ ಅಭ್ಯರ್ಥಿಗಳಿಂದ ಕಾರ್ಯಭಾರಕ್ಕೆ ಅನುಗುಣವಾಗಿ ಅರ್ಜಿ ಆಹ್ವಾನಿಸಲಾಗಿದೆ. ಯು.ಜಿ.ಸಿ ನಿಯಮಾವಳಿಗಳ ಅನ್ವಯ ಅರ್ಹತೆ ಹೊಂದಿರುವವರು ನೆಟ್/ಕೆ.ಸೆಟ್ ಉತ್ತೀರ್ಣರಾಗಿರುವವರು ಅಥವಾ ಕೋರ್ಸ್‌ವರ್ಕ್‌ನೊಂದಿಗೆ ಪಿಹೆಚ್.ಡಿ ಪದವಿ ಪಡೆದಿರುವವರು ಅರ್ಹರಾಗಿರುತ್ತಾರೆ. ವಿಶ್ವವಿದ್ಯಾಲಯದ ನಿಯಮಾನುಸಾರ ವೇತನ ನೀಡಲಾಗುವುದು.

| | | |
|---|---|---|
| 1. | ಅರ್ಜಿ ಸಲ್ಲಿಸುವ ಪ್ರಾರಂಭ ದಿನಾಂಕ | 12-10-2026 |
| 2. | ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ | 27-10-2026 |

ಈ ಸಂಬಂಧ ಹೆಚ್ಚಿನ ವಿವರಗಳನ್ನು ಬೀದರ ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣ https://bidaruniversity.karnataka.gov.in/en ದಿಂದ ಪಡೆಯಬಹುದು. ಅರ್ಜಿ ಫಾರ್ಮ್ ಹಾಗೂ ಇನ್ನಿತರ ವಿವರಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಅರ್ಜಿ ಸಲ್ಲಿಸಬಹುದಾಗಿದೆ.

ಭರ್ತಿ ಮಾಡಿದ ಅರ್ಜಿಗಳೊಂದಿಗೆ ಸಾಮಾನ್ಯ ವರ್ಗ ರೂ.1000/- ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ-1(ಪ್ರಮಾಣಪತ್ರದೊಂದಿಗೆ) ಅಭ್ಯರ್ಥಿಗಳು ರೂ.500/-ಗಳನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಹಣಕಾಸು ಅಧಿಕಾರಿಗಳು ಬೀದರ ವಿಶ್ವವಿದ್ಯಾಲಯ, ಬೀದರ ಇವರ ಖಾತೆ **(Ac.No:- 41888972425- IFSC Code:- SBIN0013027)**ಗೆ ಸಂದಾಯವಾಗುವಂತೆ ನೆಫ್ಟ್/ಆರ್.ಟಿ.ಜಿ.ಎಸ್/ಚಲನ್ ಪಡೆದು ಅರ್ಜಿಗೆ ಲಗತ್ತಿಸಬಹುದಾಗಿದೆ. ತಮ್ಮ ಎಲ್ಲಾ ಶೈಕ್ಷಣಿಕ ಅರ್ಹತೆ, ಅನುಭವದ ವಿವರಗಳು ಮತ್ತು ದೃಢೀಕೃತ ದಾಖಲೆಗಳೊಂದಿಗೆ ನಿಗದಿತ ಅವಧಿಯೊಳಗೆ ಕುಲಸಚಿವರು(ಆಡಳಿತ), ಬೀದರ ವಿಶ್ವವಿದ್ಯಾಲಯ, ಬೀದರ-ಜ್ಞಾನ ಕಾರಂಜಿ ಹಾಲಹಳ್ಳಿ-ಕೆ, ಬೀದರ- 585414, ಕರ್ನಾಟಕ ಇವರಿಗೆ ಅರ್ಜಿಗಳನ್ನು ಕಳುಹಿಸಲು ಸೂಚಿಸಲಾಗಿದೆ.

Pannu 9.10.2026

ಕುಲಸಚಿವರು(ಆಡಳಿತ)
ಬೀದರ ವಿಶ್ವವಿದ್ಯಾಲಯ, ಬೀದರ

ಕುಲಸಚಿವರು
ಬೀದರ ವಿಶ್ವವಿದ್ಯಾಲಯ
ಜ್ಞಾನ ಕಾರಂಜಿ, ಹಾಲಹಳ್ಳಿ (ಕೆ)-585414
ಬೀದರ, ಕರ್ನಾಟಕ

Scanned with OKEN Scanner